**ಪಾಠ 7**

## ಸಭೆ:

# ಅದರಲ್ಲಿ ಸೇರಲ್ಪಡಬೇಕೋ?

**ಚರ್ಚೆಯ ವಿಷಯ**

1. **ಸಭೆಯನ್ನು ಸೇರಿಕೊಳ್ಳುವುದಕ್ಕೆ ಹೊಸ ಒಡಂಬಡಿಕೆಯಲ್ಲಿ ಒಂದು ಉದಾಹರಣೆ ಇಲ್ಲವೇ ಆಜ್ಞೆ ಇರುವುದೋ?**
   a. ಹಾಗಿದ್ದರೆ, ಎಲ್ಲಿ? ಇಲ್ಲದಿದ್ದರೆ ಒಬ್ಬನು ಪರಿಶುದ್ಧ ಬರಹಕ್ಕನುಗುಣವಾಗಿ ಸಭೆಯನ್ನು ಸೇರಿಕೊಳ್ಳಬಹುದೋ?
   b. ಒಬ್ಬನು ಕರ್ತನನ್ನು ಹೇಗೆ ತಿಳಿದುಕೊಳ್ಳುವನು (1 ಯೋಹಾನ 2:3, 4)?
   c. ಉದಾಹರಣೆಗಳ ಉದ್ದೇಶವೇನು (1 ಪೇತ್ರ 2:21)? ಅವುಗಳನ್ನು ಎಷ್ಟರ ಮಟ್ಟಿಗೆ ಅನುಕರಿಸಬೇಕು (1 ಕೊರಿಂಥ 4:6ಎ, ಬಿ)?
   d. ಉದಾಹರಣೆಯಿಂದ ಇಲ್ಲವೇ ಆಜ್ಞೆಯಿಂದ ಸಭೆಯನ್ನು ಸೇರಿಕೊಳ್ಳಬಹುದೋ?
2. **"ತನ್ನನ್ನು ಶಿಷ್ಯರೊಂದಿಗೆ ಸೇರಿಸಿಕೊಳ್ಳಲು" ಪೌಲನ ಅಪೇಕ್ಷೆಯನ್ನು ವಿವರಿಸಿರಿ (ಅಪೊಸ್ತಲರ ಕೃತ್ಯಗಳು 9:26)?**
   a. ಪೌಲನು ಯೆರೂಸಲೇಮ ಸಭೆಯನ್ನು ಸೇರಿಕೊಳ್ಳಲು ಬಯಸಿದನೋ?
   b. ಪೌಲನು ಯಾವಾಗ ಒಬ್ಬ ಸಭೆಯ ಸದಸ್ಯನಾದನು (ಅಪೊಸ್ತಲರ ಕೃತ್ಯಗಳು 22:16; 1 ಕೊರಿಂಥ 12:13)?
   c. ಈ ಸಮಯದಲ್ಲಿ ಪೌಲನು ಎಷ್ಟು ಸಮಯದವರೆಗೆ ಪ್ರಸಂಗಿಸುತ್ತಿದ್ದನು (ಗಲಾತ್ಯ 1:17, 18)?
3. **"Join" ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಹನ್ನೊಂದು ಸಲ ಉಪಯೋಗಿಸಲ್ಪಟ್ಟಿದೆ. ಈ ಉಲ್ಲೇಖಗಳಿಂದ ಅದು ಎಂದೂ ಸಭೆಗೆ ಸೇರಿಸಿಕೊಳ್ಳುವುದರ ಬಗ್ಗೆ ಸಂಬಂಧಿಸಿರುವದಿಲ್ಲ ಎಂಬುದನ್ನು ತೋರಿಸಿರಿ (ಮತ್ತಾಯ 19:6; ಮಾರ್ಕ 10:9; ಲೂಕ 15:15; ಅಪೊಸ್ತಲರ ಕೃತ್ಯಗಳು 5:13, 36; 8:29; 9:26; 18:7; 1 ಕೊರಿಂಥ 6:16, 17; ಎಫೆಸ 5:31).**

**ಸಭೆಯ ಸದಸ್ಯತ್ವವು ಒಂದು ದೈವಿಕ ಹಕ್ಕು ಆಗಿರುತ್ತದೆ**

1. **ಸಭೆಗೆ ಯಾರು ಕೂಡಿಸುವರು (ಅಪೊಸ್ತಲರ ಕೃತ್ಯಗಳು 2:41, 47)? ದೇವರು ಯಾವಾಗ ಈ ಜನರನ್ನು ಸಭಗೆ ಕೂಡಿಸಿದನು (ಅಪೊಸ್ತಲರ ಕೃತ್ಯಗಳು 2: 38, 41, 47)?**
2. **ದೇಹದೊಳಗೆ ಅಂಗಗಳನ್ನು ಇಡುವವರು ಯಾರು (1 ಕೊರಿಂಥ 12:18)?**
   a. ಆದರೆ ದೇಹವು ಯಾವುದು (1 ಕೊರಿಂಥ 12:27; ಕೊಲೊಸ್ಸೆ 1:18)?
   b. ಕೊರಿಂಥದವರನ್ನು ದೇವರು ದೇಹದಲ್ಲಿ ಯಾವಾಗ ಇಟ್ಟನು (1 ಕೊರಿಂಥ 12:13)?
   c. ರಕ್ಷಿಸಲ್ಪಟ್ಟ ಎಲ್ಲರನ್ನೂ ಸಭೆಗೆ ಯಾರು ಕೂಡಿಸುತ್ತಾರೆ (ಅಪೊಸ್ತಲರ ಕೃತ್ಯಗಳು 2:41, 47ಬಿ)?
   ಒಬ್ಬನು ಕೂಡಿಸಲ್ಪಟ್ಟನಂತರ, ಅವನು ಇನ್ನೊಂದಕ್ಕೆ ಸೇರಿಸಿದರೆ

ಏನಾಗುವುದು (ಮತ್ತಾಯ 15:13)?

**ರಕ್ಷಿಸಲ್ಪಟ್ಟ ಎಲ್ಲರಿಗೂ ದೇವರು ಸದಸ್ಯತ್ವವನ್ನು ಕೊಡುವನು**

1. **"ಸಭೆ" ಎಂಬ ಪದದ ಅರ್ಥವು ಏನಾಗುವುದು? "ಹೊರಗೆ ಕರೆಯಲ್ಪಟ್ಟವರು."**
   ಸುವಾರ್ತೆಯಿಂದ ಒಬ್ಬನು ಹೊರಗೆ ಕರೆಯಲ್ಪಟ್ಟಾಗ, ಅವನು ಏನಾಗುವನು (2 ಥೆಸಲೊನೀಕ 2:14; 1:1)?
2. **ವಿಮೋಚಿತರಾದವರೆಲ್ಲರೂ ಯಾರಲ್ಲಿ ಇರುವರು (ಎಫೆಸ 1:7; ಕೊಲೊಸ್ಸೆ 1:14)?**
   a. ಒಬ್ಬನು ಯಾವಾಗ ವಿಮೋಚಿಸಲ್ಪಡುವನು (ಗಲಾತ್ಯ 3:26, 27)?
   b. ಆದರೆ ಬಾಪ್ತಿಸ್ಮ ಹೊಂದಿದವರಿಗೆ ದೇವರು ಏನು ಮಾಡಿದನು (ಅಪೊಸ್ತಲರ ಕೃತ್ಯಗಳು 2:41, 47)?
   ಹಾಗಾದರೆ ವಿಮೋಚಿತರಾದವರೆಲ್ಲರೂ ಸಭೆಯ ಸದಸ್ಯರಾಗಿರುವುದಿಲ್ಲವೇ?
3. **ಯಾರಲ್ಲಿ ಎಲ್ಲರೂ ಸಂಧಾನವಾಗಿದ್ದಾರೆ (2 ಕೊರಿಂಥ 5:18)?**
   a. ದೇವರು ಯೆಹೂದ್ಯರನ್ನೂ ಅನ್ಯರನ್ನೂ ಯಾವುದರಲ್ಲಿ ಸಂಧಾನಗೊಳಿಸಿದನು (ಎಫೆಸ 2:15, 16)?
   b. ಆದರೆ ಕ್ರಿಸ್ತನ ದೇಹವು ಯಾವುದಾಗಿರುವುದು (ಎಫೆಸ 1:22, 23; ಕೊಲೊಸ್ಸೆ 1:18)?
   c. ಕ್ರಿಸ್ತನ ದೇಹದಲ್ಲಿ ಎಲ್ಲರೂ ಹೇಗೆ ಪ್ರವೇಶಿಸುವರು (1 ಕೊರಿಂಥ 12:13)?
   ಹಾಗಾದರೆ, ಸಂಧಾನಗೊಂಡ ಎಲ್ಲರೂ ಸಭೆಯ ಸದಸ್ಯರಾಗಿರುವುದಿಲ್ಲವೇ?
4. **ದೇವರ ಮನೆಯು ಯಾವುದು (1 ತಿಮೊಥೆ 3:15)?**
   a. ಅಪೊಸ್ತಲರ ಕೃತ್ಯಗಳು 16:31, 32; 1 ಕೊರಿಂಥ 1:16; ಇಬ್ರಿಯ 11:7ರಲ್ಲಿ "ಮನೆ" ಎಂಬುದಕ್ಕೆ ಯಾವ ಅರ್ಥ ಇದೆ?
   b. 1 ತಿಮೊಥೆ 3:15ರಲ್ಲಿ "ದೇವರ ಮನೆ" ಯಾವುದಾಗಿದೆ?
   c. ದೇವರಿಗೆ ಆತನ ಕುಟುಂಬದ ಹೊರಗೆ, ಇಲ್ಲವೇ ಆತನ "ಮನೆಯ" ಹೊರಗೆ ಯಾವುದೇ ಮಕ್ಕಳಿರುವವೋ?
   d. ದೇವರ ಕುಟುಂಬವು ಸಭೆಯಾಗಿರುವುದರಿಂದ, ರಕ್ಷಿಸಲ್ಪಟ್ಟಿರುವವರೆಲ್ಲರೂ ಈ ಕುಟುಂಬದಲ್ಲಿರುವದಿಲ್ಲವೋ?
   ಹಾಗಾದರೆ ರಕ್ಷಿಸಲ್ಪಟ್ಟವರೆಲ್ಲರೂ ಸಭೆಯಲ್ಲಿರುವರು ಎಂದಾಗುವುದಿಲ್ಲವೋ.
   e. ಒಬ್ಬನು ತನ್ನ ದೈಹಿಕ ಕುಟುಂಬವನ್ನು "ಸೇರಿಕೊಳ್ಳಬೇಕೋ" ಇಲ್ಲವೇ ಅವನಿಗೆ ಅದರೊಳಗೆ ಜನ್ಮಸಿದ್ಧ ಹಕ್ಕು ಇರುವುದೋ?
   f. ಒಬ್ಬನು ದೇವರ ಕುಟುಂಬದಲ್ಲಿ ಯಾವಾಗ ಹುಟ್ಟುವನು (ಯೋಹಾನ 3:5)?
   g. ಹಾಗಾದರೆ, ಒಬ್ಬನು ಯಾವಾಗ ಸಭೆಯ, ದೇವರ ಕುಟುಂಬದ ಸದಸ್ಯನಾಗುವನು?

**ಅತಿ ಮುಖ್ಯವಾದ ಪ್ರಶ್ನೆ**

1. **ಪಂಚಾಶತ್ತಮ ದಿನದಂದು ಜನರು ಏನೆಂದು ವಿಚಾರಿಸಿದರು (ಅಪೊಸ್ತಲರ ಕೃತ್ಯಗಳು 2:37)?**
   a. ರಕ್ಷಿಸಲ್ಪಡಲು ಅವರು ಏನು ಮಾಡಬೇಕೆಂದು ಹೇಳಲ್ಪಟ್ಟರು (ಅಪೊಸ್ತಲರ ಕೃತ್ಯಗಳು 2:38)?
   b. ಅವರು ಸಭೆಯನ್ನು ಸೇರಬೇಕೆಂದು ಯಾಕೆ ಹೇಳಲ್ಪಡಲಿಲ್ಲ (ಅಪೊಸ್ತಲರ ಕೃತ್ಯಗಳು 2:41, 47)?

**2. ಪಶ್ಚಾತ್ತಾಪ ಪಟ್ಟು ಸೌಲನು ಯೇಸುವನ್ನು ಏನೆಂದು ಕೇಳಿದನು (ಅಪೊಸ್ತಲರ ಕೃತ್ಯಗಳು 9:6)?**

a. ಅವನ ಪ್ರಶ್ನೆಗೆ ಯಾವ ಉತ್ತರ ಕೊಡಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 9:6, 18; 22:16)?

b. ಸಭೆಗೆ ಸೇರಬೇಕೆಂದು ಅವನಿಗೆ ಯಾಕೆ ಹೇಳಲ್ಪಡಲಿಲ್ಲ (ಅಪೊಸ್ತಲರ ಕೃತ್ಯಗಳು 2:41, 47)?

**3. ಸೆರೆಮನೆಯ ಅಧಿಕಾರಿ ಏನೆಂದು ಕೇಳಿದನು? ಏನು ಮಾಡಬೇಕೆಂದು ಅವನು ಹೇಳಲ್ಪಟ್ಟನು (ಅಪೊಸ್ತಲರ ಕೃತ್ಯಗಳು 16:30-34)?**

ಈ ವಿಧೇಯತೆಯು ಅವನನ್ನು ಯಾವುದರ ಸದಸ್ಯನನ್ನಾಗಿ ಮಾಡಿತು (ಫಿಲಿಪ್ಪಿ 1:1; 4:15)?

**4. ಆದುದರಿಂದ, ಬಗೆ ಹರಿಸಲು ಅತೀ ಮುಖ್ಯವಾದ ಪ್ರಶ್ನೆಯು ಯಾವುದು (ಅಪೊಸ್ತಲರ ಕೃತ್ಯಗಳು 16:30)?**

© 2009 Truth for Today